## ಹೊರೆಯಾಗಿದೆ ನೆರೆ



ಜುಲೈ 2ರ ಸಂಚಿಕೆಯಲ್ಲಿ ಡಿ.ಎಂ. ಘನಶ್ಯಾಮ ಅವರ ‘ಗಡಿಕಿಡಿ’ ಲೇಖನ ಭಾರತ–ಚೀನಾ ದೇಶಗಳ ನಡುವಿನ ಬಾಂಧವ್ಯದ ವಿಚಾರದಲ್ಲಿ ಕಣ್ಣು ತೆರೆಸುವ ಮಾಹಿತಿಗಳನ್ನು ಹೊಂದಿತ್ತು. ಇದೇ ಸಂದರ್ಭದಲ್ಲಿ ಚೀನಾದ ಕುತಂತ್ರಕ್ಕೆ ಮಣಿದು ನೆರೆಯ ಭಾರತದೊಟ್ಟಿಗೆ ಸಹೋದರ ಸಂಬಂಧ ಹೊಂದಿರುವ ನೇಪಾಳ ತೆಗೆದಿರುವ ತಕರಾರು ಹೆಚ್ಚು ಆಘಾತಕಾರಿಯಾಗಿದೆ.

—ರಾಜೀವ್ ಮಾಗಲ್, ಹಾಸನ ಜಿಲ್ಲೆ

‘ಗಡಿ–ಕಿಡಿ’ ಸಂಘರ್ಷಗಳ ಕಥನ ಓದಿದ ಪ್ರತಿ ‘ಭಾರ’ತೀಯನ ಮನಸ್ಸು ‘ಭಾರ’ವಾಗಿ ಚೀನಾಕ್ಕೆ ‘ಛೀ’ಮಾರಿ ಹಾಕುವ ಸ್ಥಿತಿಗೆ ಬಂದಿದೆ ಎಂದರೆ ತಪ್ಪಾಗಲಾರದು.

—ಎಡ್ವರ್ಡ್ ರೊಡ್ರಿಗಸ್ ಎಸ್.ಜೆ., ಬೆಂಗಳೂರು

‘ಗಡಿಕಿಡಿ’ ಮುಖಪುಟ ಬರಹ ಸಕಾಲಿಕ. ಎರಡು ದೇಶಗಳ ಸಂಬಂಧಗಳು ವಿಷಮ ಸ್ಥಿತಿಯನ್ನು ತಲುಪಿರುವ ಕಾಲಘಟ್ಟದಲ್ಲಿ ನಮ್ಮ ಗಡಿಯಲ್ಲಿ ನಡೆಯುತ್ತಿರುವ ಘಟನಾವಳಿಗಳ ವಸ್ತುನಿಷ್ಠ ಮಾಹಿತಿಯನ್ನು ಲೇಖನ ಓದುಗರ ಮುಂದೆ ಪ್ರಸ್ತುತಪಡಿಸಿದೆ.

—ಪ. ಚಂದ್ರಕುಮಾರ, ಗೌನಹಳ್ಳಿ

ದೂರ ಹೋಗಲು ಅನೇಕ ಕಾರಣಗಳಿರಬಹುದು. ವಾಪಸ್ ಬಂದೇ ಬರುವೆನೆಂಬ ನಂಬಿಕೆಯೂ ನಿಜವಾಗದಿರಬಹುದು. ಆ ದ್ವಂದ್ವವನ್ನು ಅತ್ಯಂತ ಹೃದಯಂಗಮವಾಗಿ ವಿವರಿಸಿದ್ದಾರೆ. ಜನನಿಬಿಡ ಜಗತ್ತಿನಲ್ಲಿಯೂ ಆ ಚಾಲಕನ ಒಂಟಿತನದ ನೋವು ಅರಿವಿಗೆ ಬಂದು ಹೃದಯ ಭಾರವಾಯಿತು. ಮುಚ್ಚಿಟ್ಟ ವಾಲ್ನಟ್ ಮೊಟ್ಟೆಯ ಒಳಗೇನಿದೆಯೋ ಬಲ್ಲವರಾರು? ಯಾರ ಭವಿಷ್ಯ ಯಾರೂ ಬರೆಯಲಾರರು.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

ವಿನಯ್ ರಾಜ್ ಅವರ ಲೇಖನ ‘ಚೆನ್ನೈ ಡೈರಿ’ (ಜುಲೈ 2) ಊರಿಂದ ಊರಿಗೆ ಜೀವನೋಪಾಯಕ್ಕೆ ಕೆಲಸ ಮಾಡಲು ಹೋಗುವವರ ಮನಸ್ಥಿತಿಯನ್ನು ಸೂಚಿಸುತ್ತದೆ. ಹೆಂಡತಿ, ಮಕ್ಕಳು ಹಾಗೂ ಪರಿವಾರದವರನ್ನು ಸಾಕಲು ಪರ ಊರಿಗೆ ಬಂದು ಉದ್ಯೋಗ ಮಾಡಿ ಸಂಪಾದಿಸಿ ಕುಟುಂಬವನ್ನು ಒಂದು ಹಂತಕ್ಕೆ ತಂದಿರುತ್ತಾರೆ. ಅಂತಹವರು, ತಾವು ಪಟ್ಟ ಕಷ್ಟಗಳನ್ನು ಕೇಳುವವರಿಲ್ಲದೆ ಹೊಸಹೊಸ ಪರಿಚಯದವರೊಂದಿಗೆ ಹೇಳಿ ಸಮಾಧಾನ ಮಾಡಿಕೊಳ್ಳುವರು. ಯಾರೇ ಆಗಲಿ ಹುಟ್ಟಿ ಬೆಳೆದ ತನ್ನ ಊರು, ಪರಿಸರ ಮರೆಯುವುದು ಸುಲಭವಲ್ಲ.

—ಎಚ್.ಎಸ್.ರಾಘವೇಂದ್ರ, ಬೆಂಗಳೂರು



## ಆಹಾ, ಎಂಥ ಘಮಲು...

ಟಿ.ಎಸ್. ಗೊರವರ ಕಥೆ ‘ಹೂಸು’ (ಜುಲೈ 2) ಹೆಸರು ಓದಿದಾಗ, ಈ ಹೆಸರಿನಲ್ಲೂ ಸಹ ಕಥೆ ಬರೆಯಬಹುದೇ ಎಂದು ಆಶ್ಚರ್ಯಪಟ್ಟೆ. ಈ ಕಥೆಯ ಪತ್ತೆದಾರಿಕೆ ಬಹಳ ರೋಚಕವಾಗಿದೆ!

—ಚಲುವನಹಳ್ಳಿ ರಾಜಶೇಖರ್, ಹಾಸನ

ಗೊರವರರ ಕಥೆ ಗಂಡುಲೋಕದ ವಾಸನೆಯನ್ನು ಬಹಿರಂಗಗೊಳಿಸುವಂತಿದೆ. ಸರಳವೆನ್ನಿಸುವ ಮಾರ್ಮಿಕ ಕಥೆ. ಹೂಸಿನ ಮೂಲಕ ದಾಂಪತ್ಯದ ತವಕತಲ್ಲಣಗಳನ್ನು ಚಿತ್ರಿಸಲು ಯತ್ನಿಸಿರುವುದು ಪರಿಣಾಮಕಾರಿಯಾಗಿದೆ.

—ಸಹಜಾ ಎನ್.ಕೆ., ರಾಯಚೂರು

## ಮಹಿಳೆಯರಿಗೆ ಉಪಯುಕ್ತ

ಡಾ. ವೀಣಾ ಭಟ್ ಅವರು ‘ಕಾಡುವ ಕಿಬ್ಬೊಟ್ಟೆ’ ನೋವಿನ ಬಗ್ಗೆ ಹಾಗೂ ಗರ್ಭಕೋಶದ ಹಲವಾರು ಕಾಯಿಲೆ ಬಗ್ಗೆ ಹೆಣ್ಣುಮಕ್ಕಳಿಗೆ ಚಿತ್ರದ ಸಮೇತ ತಿಳುವಳಿಕೆ ಮೂಡಿಸಿದ್ದಾರೆ (ಜುಲೈ 2). ಹಲವು ಮಹಿಳೆಯರು ಅವರು ತಿಳಿಸಿದ ಅನೇಕ ಬಗೆಯ ನೋವುಗಳಿಂದ ನರಳುತ್ತಿರುತ್ತಾರೆ. ಇಂತಹ ಲೇಖನಗಳಿಂದ ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

‘ಕಾಡುವ ಕಿಬ್ಬೊಟ್ಟೆನೋವು’ ಲೇಖನ ಓದುತ್ತಾ ಹೋದಂತೆ ಸ್ತ್ರೀಯರ ಎಷ್ಟೋ ಸಂಶಯಗಳಿಗೆ ಉತ್ತರ ದೊರೆಯುತ್ತದೆ. ಸ್ತ್ರೀಯರ ಆರೋಗ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಪ್ರಕಟಿಸುವುದರಿಂದ ಮನೆಮಂದಿ ಆರೋಗ್ಯದ ಅರಿವು ಹೊಂದಬಹುದು.

—ಅನುಸೂಯ ತ್ರಿವಿಕ್ರಮ್ ಕೇದಿಗೆಮನೆ

## ಮೊಟ್ಟೆಯ ಒಳಗೇನಿದೆಯೋ?

‘ಚೆನ್ನೈ ಡೈರಿ’ಯ ಕೆಲವು ಅಂಶಗಳು ಮನಸೆಳೆದವು. ಹುಟ್ಟಿದ ಊರಿನ ಸೆಳೆತ, ತಾಯ್ನುಡಿಯ ತುಡಿತ ಎಲ್ಲರಿಗೂ ಒಂದಲ್ಲ ಒಂದು ಸಂದರ್ಭದಲ್ಲಿ ಕಾಡಿಯೇ ಕಾಡುತ್ತವೆ.



## ಛಂದದ ಕರೆ

‘ಛಂದ ಪುಸ್ತಕ’ ಈ ಸಾಲಿನ ‘ಛಂದ ಪುಸ್ತಕ’ ಬಹುಮಾನಕ್ಕಾಗಿ ಹಸ್ತಪ್ರತಿಗಳನ್ನು ಆಹ್ವಾನಿಸುತ್ತಿದೆ. ಇದುವರೆಗೂ ಒಂದೂ ಕಥಾಸಂಕಲನ ಹೊರತಂದಿರದ ಲೇಖಕರಿಗೆ ಮಾತ್ರ ಅವಕಾಶ. ಸಾಹಿತ್ಯದ ಇತರ ಪ್ರಕಾರಗಳಲ್ಲಿ ಒಂದೆರಡು ಪುಸ್ತಕಗಳು ಪ್ರಕಟವಾಗಿದ್ದರೆ ಪರವಾಗಿಲ್ಲ. ಉತ್ತಮವೆನಿಸಿದ ಸುಮಾರು 8 ಕತೆಗಳನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ, ಮುದ್ರಿತ ಹಸ್ತಪ್ರತಿಯನ್ನು ಕೊರಿಯರ್ ಮೂಲಕ ಕಳುಹಿಸಬೇಕು. ಇಮೇಲ್ ಮುಖಾಂತರ ಕತೆಗಳನ್ನು ಸ್ವೀಕರಿಸಲಾಗುವುದಿಲ್ಲ. ಆಯ್ಕೆಯಾದ ಕತೆಗಾರರಿಗೆ ಮೂವತ್ತು ಸಾವಿರ ರೂಪಾಯಿ ಬಹುಮಾನ ಕೊಟ್ಟು, ಅವರ ಕಥಾಸಂಕಲನವನ್ನು ಛಂದ ಪುಸ್ತಕ ಪ್ರಕಟಿಸುತ್ತದೆ.

ಕತೆಗಳನ್ನು ಕಳಿಸಬೇಕಾದ ವಿಳಾಸ: ಛಂದ ಪುಸ್ತಕ, C/O ವಸುಧೇಂದ್ರ, ಐ004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076 (ವಾಟ್ಸಾಪ್. 98444 22782).

ಕೊನೆ ದಿನ: ಜುಲೈ 15, 2020.

ವಿವರಗಳಿಗೆ:
vas123u@rocketmail.com

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in